# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1157 |
| 2 | ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ ಅರಳಿ(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : | **20.12.2018** |
| 4 | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು, |

| | ಪ್ರಶ್ನೆ | ಉತ್ತರ |
|---|---|---|
| ಅ) | ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷಕ್ಕೆ 1500 ಕೋಟಿ ಅನುದಾನ ಬಿಡುಗಡೆ ಮಾಡುವುದಾಗಿ ಘೋಷಿಸಿದ್ದು, 2015-16ರಿಂದ 2018-19 ನೇ ಸಾಲಿನವರೆಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡದಿದ್ದಲ್ಲಿ, ಉಳಿದ ಹಣ ಬಿಡುಗಡೆ ಮಾಡುವುದು ಯಾವಾಗ; | 2015-16ರಿಂದ 2018-19ರವರೆಗೆ ಒದಗಿಸಿರುವ ಮತ್ತು ಬಿಡುಗಡೆಗೊಳಿಸಿರುವ ಅನುದಾನದ ವಿವರಗಳು ಕೆಳಕಂಡಂತಿದೆ. (ರೂ. ಕೋಟಿಗಳಲ್ಲಿ) |

| ವರ್ಷ | ಆಯವ್ಯಯ ಅಂದಾಜು | ಬಿಡುಗಡೆ ಗೊಳಿಸಿರುವ ಅನುದಾನ | ವರ್ಷಾಂತ್ಯದಲ್ಲಿ ವೆಚ್ಚವಾಗದೆ ಉಳಿದಿದ್ದ ವೆಚ್ಚ |
|---|---|---|---|
| 2015-16 | 1000.00 | 571.68 | 131.36 |
| 2016-17 | 1000.00 | 928.32 | 116.95 |
| 2017-18 | 1000.00 | 800.00 | 286.29 |
| 2018-19 (ನವೆಂಬರ್ 2018ರ ಅಂತ್ಯಕ್ಕೆ) | 1000.00 | 750.00 | 436.32 |

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ರೂ.1500 ಕೋಟಿ ಅನುದಾನ ನೀಡಲಾಗುವುದೆಂದು ಘೋಷಿಸಲಾಗಿತ್ತು. ಆದರೆ, ಮಂಡಳಿಯು 2017-18ನೇ ಸಾಲಿನ ಅನುದಾನದಿಂದ (ರೂ.1000.00 ಕೋಟಿ) ಪೈಕಿ ಬಿಡುಗಡೆ ಮಾಡಿದ್ದ ಮೊತ್ತವನ್ನು ಸಂಪೂರ್ಣವಾಗಿ ಉಪಯೋಗಿಸಲು ಸಾಧ್ಯವಾಗದೆ ಮಾರ್ಚ್ 2018ರ ಅಂತ್ಯಕ್ಕೆ ರೂ.286.29 ಕೋಟಿಗಳನ್ನು ಬ್ಯಾಂಕ್ ಖಾತೆಯಲ್ಲಿ ಉಳಿಸಿಕೊಂಡಿತ್ತು. ಸಾಮಾನ್ಯವಾಗಿ, ಆಯವ್ಯಯ ಅಂದಾಜು ತಯಾರಿಸುವ ಸಂದರ್ಭದಲ್ಲಿ ಹಿಂದಿನ ವರ್ಷದಲ್ಲಿ ಭರಿಸಿರುವ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಂಡು ವೆಚ್ಚವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸಲಾಗುವುದು. ಇದರಿಂದ ಸರ್ಕಾರದ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ರೂ.1000.00 ಕೋಟಿ ಅನುದಾನ ಒದಗಿಸಲಾಗಿದ್ದು, ಈಗಾಗಲೇ 3 ತ್ರೈಮಾಸಿಕ ಕಂತುಗಳನ್ನು ಬಿಡುಗಡೆ ಮಾಡಲಾಗಿದ್ದು, 2018-19ನೇ ಸಾಲಿನಲ್ಲಿ ಇನ್ನೂ 1 ತ್ರೈಮಾಸಿಕ ಕಂತು ರೂ.250.00 ಕೋಟಿಗಳ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು.

ಮೇಲಿನ ಪಟ್ಟಿಯಲ್ಲಿನ ವಿವರಗಳನ್ನು ಗಮನಿಸಿದಾಗ ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಬಿಡುಗಡೆಗೊಳಿಸಲಾಗಿರುವ ಅನುದಾನಲ್ಲೇ ಸರಾಸರಿ 100.00 ರಿಂದ 200.00 ಕೋಟಿಗಳಷ್ಟು ಅನುದಾನ ಬಾಕಿ ಉಳಿಸಿಕೊಂಡು ಬರಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಆಇ 2 ಟಿಎಫ್‌ಪಿ 2018ರನ್ವಯ ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಶೇಕಡ 75%ರಷ್ಟು ಅನುದಾನ ಕಡ್ಡಾಯವಾಗಿ ವೆಚ್ಚ ಮಾಡಬೇಕಾಗಿದ್ದು, ವೆಚ್ಚ ಮಾಡಿರದ ಕಾರಣ ಸಂಪೂರ್ಣವಾಗಿ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಈಗಾಗಲೇ ತಿಳಿಸಿರುವಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಪ್ರತಿ ಕಂತಿನ ಅನುದಾನ ಬಿಡುಗಡೆ ಕ್ಲುಪ್ತ ಸಮಯದಲ್ಲಿ ಬಳಸಿಕೊಂಡರೆ ವರ್ಷದ ಆಯವ್ಯಯದ ಜೊತೆಗೆ ಅವಶ್ಯ ಹೆಚ್ಚುವರಿಯನ್ನು ಸಹ ಬಿಡುಗಡೆ ಮಾಡಬಹುದಾಗಿದೆ.

| ಕ್ರ | ಪ್ರಶ್ನೆ | ಉತ್ತರ |
|---|---|---|
| ಆ) | ಕೇಂದ್ರ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗವು 2016 ರಿಂದಲೇ ಜಾರಿಯಾಗಿದ್ದು ರಾಜ್ಯ ಸರ್ಕಾರದ ನೌಕರರಿಗೆ ಇಲ್ಲಿಯವರೆಗೆ ಜಾರಿ ಮಾಡಿರುವುದಿಲ್ಲವಾದ್ದರಿಂದ ಜಾರಿ ಮಾಡುವುದು ಯಾವಾಗ; | ರೂಢಿಯ ಪದ್ಧತಿಯಂತೆ, ರಾಜ್ಯ ಸರ್ಕಾರವು, ಕೇಂದ್ರ ವೇತನ ಆಯೋಗಗಳ ಶಿಫಾರಸ್ಸು ಹಾಗೂ ಕೇಂದ್ರ ಸರ್ಕಾರದ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ, ತನ್ನದೇ ಆದ ವೇತನ ಆಯೋಗ/ವೇತನ ಸಮಿತಿಗಳಂತಹ ತಜ್ಞ ಸಮಿತಿಗಳ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆಗಳು ಮತ್ತು ಪಿಂಚಣಿಯನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ.<br><br>ಮುಂದುವರೆದು, 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಇತ್ತೀಚೆಗೆ ಅಂದರೆ, ದಿನಾಂಕ: 01-07-2017ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿರುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರಿ ನೌಕರರಿಗೆ ಜಾರಿಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. |
| ಇ) | ಬೀದರ್ ನಾಗರೀಕ ವಿಮಾನ ನಿಲ್ದಾಣ ಯಾವಾಗ ಪ್ರಾರಂಭಗೊಳ್ಳುವುದು; ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ; ಇಲ್ಲವಾದರೆ ಕಾರಣಗಳೇನು; | ಬೀದರ್ ವಿಮಾನ ನಿಲ್ದಾಣದ ಕಾರ್ಯಚರಣೆ ಮಾಡಲು ಹೈದ್ರಾಬಾದ್ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದೊಂದಿಗೆ M/s. GMR, ಸಂಸ್ಥೆಯು ಒಪ್ಪಂದಕ್ಕೆ ಸಹಿ ಹಾಕುವ ವಿಷಯವು ಅಂತಿಮ ಹಂತದಲ್ಲಿರುತ್ತದೆ. ಬೀದರ್ ವಿಮಾನ ನಿಲ್ದಾಣ ಟರ್ಮಿನಲ್ ಕಟ್ಟಡವನ್ನು ದುರಸ್ಥಿಗೊಳಿಸಲು ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಲೋಕೋಪಯೋಗಿ ಇಲಾಖೆಯ ಮುಖಾಂತರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ.300.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿ ಬೀದರ್‌ವರಿಗೆ ಬಿಡುಗಡೆ ಮಾಡಿರುತ್ತದೆ. Turbojet ಸಂಸ್ಥೆಯವರು ಬೆಂಗಳೂರು – ಬೀದರ್ ಮಾರ್ಗವಾಗಿ ಸೇವೆಯನ್ನು ಆರಂಭಿಸುವುದಾಗಿ ತಿಳಿಸಿರುತ್ತಾರೆ.<br><br>ಬೀದರ್ ವಿಮಾನ ನಿಲ್ದಾಣವನ್ನು ಕೇಂದ್ರ ನಾಗರಿಕ ವಿಮಾನಯಾನ ಮಂತ್ರಾಲಯದ ಹೊಸ ವಿಮಾನಯಾನ ನೀತಿಯ ಪ್ರಾದೇಶಿಕ ಸಂಪರ್ಕ ಯೋಜನೆಯಡಿ (UDAN-Ude Desh Ka Aam Nagrik) ಕಾರ್ಯಾಚರಣೆಗೊಳಿಸಲು ನಾಗರೀಕ ವಿಮಾನಯಾನ ಮಂತ್ರಾಲಯದಿಂದ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ರಾಜ್ಯಮಟ್ಟದಲ್ಲಿ ಹೈದ್ರಾಬಾದ್-ಕರ್ನಾಟಕ 371(ಜೆ) ಅಡಿಯಲ್ಲಿ ಅಧಿಕಾರಿಗಳಿಗೆ ಶೇ.8 ರಷ್ಟು ಬಡ್ತಿ ಮೀಸಲಾತಿಯನ್ನು ಇದುವರೆಗೆ ನೀಡದಿರಲು ಕಾರಣವೇನು; ಈ ತಾರತಮ್ಯವನ್ನು ಸರಿಪಡಿಸುವುದು ಯಾವಾಗ? | ರಾಜ್ಯಮಟ್ಟದಲ್ಲಿ ಹೈದ್ರಾಬಾದ್-ಕರ್ನಾಟಕ 371(ಜೆ) ಅಡಿಯಲ್ಲಿ ಅಧಿಕಾರಿಗಳಿಗೆ ಶೇ.8 ರಷ್ಟು ಬಡ್ತಿ ಮೀಸಲಾತಿಯ ಸೌಲಭ್ಯವನ್ನು ನೀಡಲಾಗುತ್ತಿದ್ದು, ಬಿ.ಕೆ ಪವಿತ್ರ ಪ್ರಕರಣವು ಸರ್ವೋಚ್ಛ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದು, ಈ ಸಂಬಂಧ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 380 ಸೇಸೇನಿ 2018 (ಭಾಗ-1), ದಿನಾಂಕ:03.08.2018ರಲ್ಲಿ ಮುಂದಿನ ನಿರ್ದೇಶನ ನೀಡುವವರೆಗೆ ಯಾವುದೇ ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆಯನ್ನು ಜರುಗಿಸದೇ ಯಥಾಸ್ಥಿತಿ ಕಾಪಾಡುವಂತೆ ಸೂಚಿಸಿರುವ ಹಿನ್ನಲೆಯಲ್ಲಿ ಅನುಚ್ಛೇದ 371ಜೆ ಅಡಿಯಲ್ಲಿ ರಾಜ್ಯಮಟ್ಟದ ಸ್ಥಳೀಯ ವೃಂದದಲ್ಲಿ ಬಡ್ತಿಗಾಗಿ ಮೀಸಲಿರಿಸಿರುವ ಹುದ್ದೆಗಳಿಗೆ ಬಡ್ತಿ ನೀಡುವಲ್ಲಿ ವಿಳಂಬವಾಗುತ್ತಿದೆ. |

**ಸಂಖ್ಯೆ: ಯೋಇ 113 ಹೈಕವಿ 2018**

( ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಶ್ರೀ ಅರವಿಂದ ಕುಮಾರ ಅರಳಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1157ರ ಪ್ರಶ್ನೆಗೆ ಪೂರಕ ಟಿಪ್ಪಣಿ.

**ಅನುಚ್ಛೇದ 371(ಜೆ) ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಪ್ರಗತಿಯನ್ನೊಳಗೊಂಡ** ರಾಜ್ಯದಲ್ಲಿನ ಹಿಂದುಳಿದಿರುವಿಕೆಯ ವಾದಾಂಶವನ್ನು ಪರಿಹರಿಸಲು ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಭಾರತದ ಸಂವಿಧಾನದ ಕಲಂ 371 ವನ್ನು ತಿದ್ದುಪಡಿ ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ ದಿನಾಂಕ 6-11-2013 ರನ್ವಯ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ರಚನೆಯಾಗಿದ್ದು, ಕಲಬುರಗಿಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಲಾಗಿರುತ್ತದೆ.

**ಆಡಳಿತ ವ್ಯವಸ್ಥೆ:**

ಹಿಂದಿನ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯ 45 ಹುದ್ದೆಗಳನ್ನು ಹೊಸದಾಗಿ ರಚಿಸಿದ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಗೆ ವರ್ಗಾಯಿಸಲಾಗಿರುತ್ತದೆ. ಇದಲ್ಲದೆ ವಿವಿಧ ವೃಂದಗಳ 38 ಹುದ್ದೆಗಳನ್ನು ಹೊಸದಾಗಿ ಸೃಜಿಸಲಾಗಿದೆ. ಪ್ರಸ್ತುತ ಒಟ್ಟು 83 ಹುದ್ದೆಗಳ ಪೈಕಿ 56 ಹುದ್ದೆಗಳು ಭರ್ತಿಯಾಗಿದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುತ್ತಿದೆ.

**ಹೊಸ ಉಪಕ್ರಮ:**

ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಅನುಷ್ಠಾನದಲ್ಲಿ ತಾಂತ್ರಿಕ/ ಆಡಳಿತಾತ್ಮಕ ಅನುಮೋದನೆಯನ್ನು ಶೀಘ್ರಗೊಳಿಸುವ ಹಾಗೂ ಸುಗಮವಾಗಿ ಅನುಷ್ಠಾನಗೊಳಿಸುವ ಹಿತ್ರದೃಷ್ಟಿಯಿಂದ ಮುಖ್ಯ ಇಂಜಿನೀಯರ್, ಸಂಪರ್ಕ ಮತ್ತು ಕಟ್ಟಡಗಳು, ಲೋಕೋಪಯೋಗಿ ಇಲಾಖೆ, ಕಲಬುರಗಿಯಲ್ಲಿ ನೂತನವಾಗಿ ವಲಯ ಕಛೇರಿಯನ್ನು ಸ್ಥಾಪಿಸಿ ಮುಖ್ಯ ಇಂಜಿನಿಯರ್ ಹುದ್ದೆಯನ್ನು ಸೃಜಿಸಲಾಗಿದೆ.

ಅನುಚ್ಛೇಧ 371-ಜೆ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಪ್ರತಿಶತ 70ರಷ್ಟು ಅನುದಾನವನ್ನು ಮೂಲಭೂತ ಸೌಲಭ್ಯಗಳ ಅಂತರಗಳನ್ನು ತುಂಬುವ ಸಲುವಾಗಿ ಹಾಗೂ ಪ್ರತಿಶತ 30ರಷ್ಟು ಅನುದಾನವನ್ನು ಸಾಂಸ್ಥಿಕ ಅಂತರಗಳನ್ನು ತುಂಬುವ ಸಲುವಾಗಿ ನಿಗಧಿಗೊಳಿಸಲಾಗಿದೆ.

**ಮಂಡಲಿಯಿಂದ ಮೂಲಭೂತ ಹಾಗೂ ಸಾಂಸ್ಥಿಕ ವಲಯದಲ್ಲಿ ವಿವಿಧ ಇಲಾಖೆಗಳಡಿ ಪ್ರಮುಖವಾಗಿ ಅನುಷ್ಠಾನಗೊಳಿಸುತ್ತಿರುವ ಮೈಕ್ರೋ ಮತ್ತು ಮ್ಯಾಕ್ರೋ ಕಾಮಗಾರಿಗಳು**

ರಸ್ತೆಗಳ ನಿರ್ಮಾಣ, ಕುಡಿಯುವ ನೀರಿನ ಸೌಲಭ್ಯ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಶೌಚಾಲಯಗಳ ನಿರ್ಮಾಣ, ಅಂಗನವಾಡಿ ಕಟ್ಟಡಗಳ ನಿರ್ಮಾಣ ಮತ್ತು ಉಪಕರಣಗಳ ಸೌಲಭ್ಯ, ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ, ಜಿಲ್ಲಾ ಆಸ್ಪತ್ರೆಗಳಲ್ಲಿ, PHC/CHC ಗಳಲ್ಲಿ ಉಪಕರಣಗಳ ಸೌಲಭ್ಯ ಮತ್ತು ವೈದ್ಯಾಧಿಕಾರಿಗಳ ಮತ್ತು ಸಿಬ್ಬಂದಿಯವರ ವಸತಿ ಗೃಹ, ಶುದ್ಧ ಕುಡಿಯುವ ನೀರಿನ ಸೌಲಭ್ಯ ಹಾಗೂ ಇತರೆ ಸೌಲಭ್ಯಗಳು ಒದಗಿಸಲು ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ, BCM & Social Welfare ಗಳ ವಸತಿ ನಿಲಯಗಳ ಕಟ್ಟಡ, ಹೆಚ್ಚುವರಿ ಕೋಣೆ. ನಿರ್ಮಾಣ, ಪೀಠೋಪಕರಣಗಳ ಸೌಲಭ್ಯ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲಾ ಮತ್ತು ಕಾಲೇಜು ಕಟ್ಟಡಗಳ ನಿರ್ಮಾಣ, ಹೆಚ್ಚುವರಿ ಕೋಣೆಗಳ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಸೌಲಭ್ಯ, ಪೀಠೋಪಕರಣಗಳ ಸೌಲಭ್ಯ, Lab Equipments. ಕ್ರೀಡಾಂಗಣಗಳ ಅಭಿವೃದ್ಧಿ ಹಾಗೂ ಉಪಕರಣಗಳ ಸೌಲಭ್ಯ.

**ಆಯವ್ಯಯ:**

ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿ ಆದೇಶ, 2013, ದಿನಾಂಕ 06.11.2013ರ ಅಧಿಸೂಚನೆ, ಅಧ್ಯಾಯ 3(13)(1) ರಂತೆ "ಮಂಡಲಿಯು, ಸಲಹಾ ಪರಿಷತ್ತು ಸಿದ್ಧಪಡಿಸಿದ ಕರಡು ಅಭಿವೃದ್ಧಿ ಯೋಜನೆಯ ಪರಿಗಣನೆಗೆ ತೆಗೆದುಕೊಂಡ ತರುವಾಯ, ಪ್ರತಿ ವರ್ಷವು, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಒಂದು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಅನುಮೊದನೆಗಾಗಿ ಅದನ್ನು ರಾಜ್ಯಪಾಲರಿಗೆ ಕಳುಹಿಸತಕ್ಕದ್ದು. ರಾಜ್ಯಪಾಲರು ಯೊಜನೆಯನ್ನು ಯಾವುದೇ ಮಾರ್ಪಾಡಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು".

2013-14ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಮಂಡಲಿಗೆ ಒದಗಿಸಿರುವ ಅನುದಾನದ, ಬಿಡುಗಡೆ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿವೆ:

(ರೂ.ಕೋಟಿಗಳಲ್ಲಿ)

| ಕ್ರ. ಸಂ | ವರ್ಷ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಬಿಡುಗಡೆ ಮಾಡಿದ ಅನುದಾನ | ವೆಚ್ಚ |
|---|---|---|---|---|
| 1 | 2013-14 | 150.00 | 30.00 | 26.66 |
| 2 | 2014-15 | 600.00 | 300.00 | 322.59 |
| 3 | 2015-16 | 1000.00 | 750.00 | 493.66 |
| 4 | 2016-17 | 1000.00 | 750.00 | 960.02 |
| 5 | 2017-18 | 1000.00 | 800.00 | 355.27 |
| 6 | 2018-19 | 1000.00 | 750.00 | 693.03* |
| ಒಟ್ಟು | | **4750.00** | **3130.00** | **2851.23** |

2013-14ನೇ ಸಾಲಿನ ವೆಚ್ಚವು ಹಿಂದಿನ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

* ನವೆಂಬರ್ 2018 ರ ಅಂತ್ಯಕ್ಕೆ

2013-14ನೇ ಸಾಲಿನ ವರ್ಷಾಂತ್ಯಕ್ಕೆ ಹಣ ಬಿಡುಗಡೆಯಾಗಿರುವ ಪ್ರಯುಕ್ತ ಆ ವರ್ಷದಲ್ಲಿ ಅನುದಾನ ವೆಚ್ಚವಾಗಿರುವುದಿಲ್ಲ. ಇದಲ್ಲದೆ ಸದರಿ ಸಾಲಿನ ಕ್ರಿಯಾ ಯೋಜನೆಯು ದಿನಾಂಕ: 03.06.2014 ರಂದು ಅನುಮೋದನೆಗೊಂಡಿರುತ್ತದೆ. 2014-15ನೇ ಸಾಲಿನಿಂದ ಕಾಮಗಾರಿಗಳು ಪ್ರಾರಂಭಗೊಂಡಿದ್ದು, ಅನುಷ್ಠಾನ ಪ್ರಕ್ರಿಯೆಯ ಮದ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಪ್ರಯುಕ್ತ ಸ್ವಲ್ಪ ಮಟ್ಟಿನ ಹಿನ್ನೆಡೆ ಉಂಟಾಗಿದ್ದು, ಪ್ರಸ್ತುತ ಕಾಮಗಾರಿಗಳು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಸೂಕ್ತ ಕ್ರಮಗಳನ್ನು ವಹಿಸಿದ್ದು ಪ್ರಸ್ತುತ ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ.

2013-14 ರಿಂದ 2018-19ನೇ ಸಾಲಿನವರೆಗೆ ಮಂಜೂರಾದ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ

| ಕ್ರ. ಸಂ | ವರ್ಷ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ವಿವಿಧ ಹಂತಗಳಲ್ಲಿರುವ ಕಾಮಗಾರಿಗಳು |
|---|---|---|---|---|---|
| 1 | 2013-14 | 592 | 592 | 0 | 0 |
| 2 | 2014-15 | 1867 | 1750 | 114 | 3 |
| 3 | 2015-16 | 3377 | 2785 | 528 | 64 |
| 4 | 2016-17 | 2959 | 2266 | 631 | 62 |
| 5 | 2017-18 | 4585 | 1840 | 1881 | 864 |
| 6 | 2018-19 | 4393 | 0 | 0 | 4393 |
| ಒಟ್ಟು | | 17773 | 9233 | 3154 | 5386 |

ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಯಿಂದ ಅನುಮೋದನೆಗೊಂಡ ಕೆಲವು ಕಾಮಗಾರಿಗಳನ್ನು ಈ ಕೆಳಕಂಡ ಕಾರಣಗಳಿಂದ ಮರುಹೊಂದಾಣಿಕೆ ಮಾಡಲಾಗಿರುತ್ತದೆ

ಅನುಷ್ಠಾನ ಇಲಾಖೆಗಳ ಪ್ರತಿಯೊಂದು ಕಾಮಗಾರಿವಾರು ಪ್ರಗತಿ ಪರಿಶೀಲನೆ ಕೈಗೊಂಡು ನಿವೇಶನ ಸಮಸ್ಯೆ, ತಾಂತ್ರಿಕವಾಗಿ ಕಾರ್ಯಸಾಧ್ಯತಾ ಇಲ್ಲದೇ ಇರುವುದು ಮತ್ತು ನಿವೇಶನ ತಕರಾರು ಹಾಗೂ ಇತ್ಯಾದಿ ಕಾರಣಗಳಿಂದ ಇರುವ ಕಾಮಗಾರಿಗಳನ್ನು ಮಾತ್ರ ಮೈಕ್ರೋ ಯೋಜನೆಯಿಂದ ರದ್ದುಪಡಿಸಿ ಅನುದಾನವು ಮ್ಯಾಕ್ರೋ ಯೋಜನೆಗೆ ವರ್ಗಾಯಿಸಲಾಗಿದೆ ಹಾಗೂ ಈವರೆಗೆ ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಮ್ಯಾಕ್ರೋ ಯೋಜನೆಗೆ ವರ್ಗಾಯಿಸಿ ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಯಿಂದ ನೇರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

**ಸಾರ್ವಜನಿಕ ಉದ್ಯೋಗದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಕರ್ನಾಟಕ** ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ,2013ನ್ನು ಹೊರಡಿಸಲಾಗಿದ್ದು, ಅದರನ್ವಯ ಇದುವರೆವಿಗೂ 85 ಕ್ಷೇತ್ರ ಇಲಾಖೆಗಳಲ್ಲಿ ಹಾಗೂ 148 ನಿಗಮ/ಮಂಡಳಿ/ವಿಶ್ವವಿದ್ಯಾಲಯ/ಸ್ವಾಯತ್ತ ಸಂಸ್ಥೆಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದವರಿಗೆ ಹುದ್ದೆಗಳನ್ನು ಗುರುತಿಸಿ, ಮೀಸಲಾತಿ ನಿಗದಿಪಡಿಸಿ ಮೀಸಲಾತಿಗೊಳಪಡುವ ಹುದ್ದೆಗಳನ್ನೊಳಗೊಂಡ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಲಾಗಿರುತ್ತದೆ. ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಿದ ತರುವಾಯ ಕಾರ್ಯನಿರ್ವಹಿಸುತ್ತಿರುವ ನೌಕರರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿ ಎಂದು ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಗುರುತಿಸಿ, ಅವರಿಂದ ಆಯ್ಕೆಪಡೆದು, ಆಯ್ಕೆಗನುಸಾರ ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಹಂಚಿಕೆಯ ತರುವಾಯ ಲಭ್ಯವಿರುವ ಖಾಲಿ ಹುದ್ದೆಗಳಿಗೆದುರಾಗಿ 10,740 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮತ್ತು 3,589 ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲಾಗಿರುತ್ತದೆ.

**ಅನಚ್ಛೇಧ 371 ಜೆ ನಂತೆ ಸಾರ್ವಜನಿಕ ಉದ್ಯೋಗದಲ್ಲಿನ ಮೀಸಲಾತಿಗೆ ಸಂಬಂಧಿತ ವಿವರಗಳು**

| ಕ್ರ.ಸಂ | ವಿವರಗಳು | ರಾಜ್ಯ ವ್ಯಾಪ್ತಿ ವಿವರಗಳು(ಸಂಖ್ಯೆ) | | | |
|---|---|---|---|---|---|
| | | ನೇರ ನೇಮಕಾತಿ | ಮುಂಬಡ್ತಿ | ನಿಯೋಜನೆ | ಒಟ್ಟು |
| 1. | ಮಂಜೂರಾದ ಒಟ್ಟಾರೆ ಹುದ್ದೆಗಳು | 242147 | 71808 | 4369 | 318324 |
| 2. | ಮೀಸಲಾತಿಗೆ ಒಳಪಡುವ ಹುದ್ದೆಗಳು | 124873 | 38624 | 2665 | 166162 |
| 3. | ಹಂಚಿಕೆಯಿಂದ ತುಂಬಲಾದ ಹುದ್ದೆಗಳು | 79522 | 20730 | 1916 | 102168 |
| 4. | ಹಂಚಿಕೆಯ ತರುವಾಯ ಲಭ್ಯವಿರುವ ಖಾಲಿ ಹುದ್ದೆಗಳು. | 42273 | 14850 | 1620 | 58743 |
| 5. | ಖಾಲಿ ಹುದ್ದೆಗಳಿಗೆ ಎದುರಾಗಿ ತುಂಬಲಾದ ಹುದ್ದೆಗಳ ಸಂಖ್ಯೆ. | 10740 | 3589 | 51 | 14380 |
| 6. | ಖಾಲಿ ಹುದ್ದೆಗಳನ್ನು ತುಂಬುವಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುವ ಹುದ್ದೆಗಳ ಸಂಖ್ಯೆ. | 21346 | 6131 | 63 | 27540 |
| 7. | ಭರ್ತಿ ಮಾಡಬೇಕಾಗಿರುವ ಹುದ್ದೆಗಳ ಸಂಖ್ಯೆ. | 10187 | 5130 | 1506 | 16823 |

ಟಿಪ್ಪಣಿ:- ಮೇಲ್ಕಂಡ ಮಾಹಿತಿಯನ್ನು 131 ಕ್ಷೇತ್ರ ಇಲಾಖೆಗಳ ಪೈಕಿ 85 ಕ್ಷೇತ್ರ ಇಲಾಖೆಗಳು ನೀಡಿರುವ ಮಾಹಿತಿಯನ್ನು ಆಧರಿಸಿ ಹಾಗೂ 266 ನಿಗಮ ಮಂಡಳಿಗಳ ಪೈಕಿ 148 ನಿಗಮ ಮಂಡಳಿಗಳು ನೀಡಲಾದ ಮಾಹಿತಿ ಆಧರಿಸಿ ತಯಾರಿಸಲಾಗಿದೆ.

**ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ** ಹಾಗೂ ಜಿ.ಹೆಚ್.ಐ.ಎ.ಎಲ್ ನಡುವಿನ ರಿಯಾಯಿತಿ ಒಪ್ಪಂದದ ಪ್ರಕಾರ (Concession Agreement) ಜಿ.ಹೆಚ್.ಐ.ಎ.ಎಲ್ ಸಂಸ್ಥೆಯ ನಿರಾಕ್ಷೇಪಣೆಯ ಹೊರತಾಗಿ 2033 ವರ್ಷದವರೆಗೆ ಹೈದ್ರಾಬಾದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ 150 ಕಿ.ಮೀ. ಪರಿಮಿತಿಯೊಳಗೆ ಯಾವುದೇ ಹೊಸ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಸುದೀರ್ಘ ವರ್ಷಗಳ ಸಮಾಲೋಚನೆಯ ನಂತರ, ಜಿ.ಹೆಚ್.ಐ.ಎ.ಎಲ್ ಸಂಸ್ಥೆಯು ಕೆಲವು ನಿರ್ದಿಷ್ಟ ನಿಯಮಗಳು ಹಾಗೂ ಷರತ್ತುಗಳ ಮೇಲೆ ಬೀದರ್ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಲು ಒಪ್ಪಿಗೆಯನ್ನು ಸೂಚಿಸಿರುತ್ತದೆ. ರಾಜ್ಯ ಸರ್ಕಾರವು ಜಿ.ಹೆಚ್.ಐ.ಎ.ಎಲ್ ಸಂಸ್ಥೆಗೆ ಬೀದರ್ ವಿಮಾನ ನಿಲ್ದಾಣದಿಂದ ಕಾರ್ಯಾಚರಣೆಯನ್ನು ನಡೆಸಲು ಹಾಗೂ ಜನವರಿ 2019ರೊಳಗಾಗಿ ಜಿ.ಹೆಚ್.ಐ.ಎ.ಎಲ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿ ಕೊಳ್ಳುವ ಕುರಿತು ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದ್ದರಿಂದ ಅಗತ್ಯವಿರುವ ಕಡ್ಡಾಯ ಸಾಧನಗಳ ಖರೀದಿಯನ್ನೊಳಗೊಂಡ ಸಿವಿಲ್ ಕಾಮಗಾರಿಗಳನ್ನು ಸಂಗ್ರಹಿಸಿದ ನಂತರ ಬೀದರ್ ವಿಮಾನ ನಿಲ್ದಾಣದಿಂದ ಕಾರ್ಯಾಚರಣೆ ಪ್ರಾರಂಭಿಸಲಾಗುವುದು.